doc-42
T.P-2

Reg. No B G 155 ಶ್ರೀ 4 1 73

In The State First Golden Jubilee Celebrated Paper 'Satyavadi' daily, Mysore 4

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಪೂರೈಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವ

ಹೊಯ್ಸಳ ಕರ್ನಾಟಕ ಸಂಘ

ಮೈಸೂರು— ಹೊಯ್ಸಳ ಕರ್ನಾಟಕ ಸಂಘದ ರಜತ ಮಹೋತ್ಸವವು ತಾ ॥ 6 ಮತ್ತು 7 ರಂದು ನಡೆಯಲಿದೆ — ಶ್ರೀ ಮಹಾ ಗಣಪತಿ ಹೋಮವು ಸಂಘದ ವಿದ್ಯಾರ್ಥಿ ನಿಲಯದಲ್ಲಿ ಉದ್ಘಾಟನಾ ಸಮಾರಂಭ, ನಾಟಕೋತ್ಸವ, ಸಮಾರೋಪ ಸಮಾರಂಭ, ಸಾಂಸ್ಕೃತಿಕ ಕಾರ್ಯಕ್ರಮ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲೂ ನಡೆಯುತ್ತವೆ.

ಮೇವಿಗೂ ಲೆವಿ

ಬೆಂಗಳೂರು— ಜಾನುವಾರುಗಳ ಮೇವಿಗೂ ಲೆವಿ ಪದ್ಧತಿ ಜಾರಿಗೆ ಬರಲಿದೆ — ಗುಲ್ಬರ್ಗ, ಬೀದರ್‌ನಲ್ಲಿ 2 ಮಿಲಿಯ ಜಾನುವಾರುಗಳ ಭೀಕರ ಪರಿಸ್ಥಿತಿಗಾಗಿ ಬೆಳಗಾಂ, ಧಾರವಾಡ, ಉತ್ತರ ಕನ್ನಡದಲ್ಲಿ ಎಕ್ರೆಗೆ 50 ಕೆಜ ಮೇವನ್ನು ಲೆವಿಯಾಗಿ ಪಡೆಯಲು ನಿರ್ಧರಿಸಲಾಗಿದೆಯೆಂದು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಪತ್ರಿಕೆಯವರಿಗೆ ತಿಳಿಸಿದರು

●

ರೂ 151 ಕೋಟಿ ಪರಿಹಾರ ಕಾರ್ಯಕ್ರಮ

ಬೆಂಗಳೂರು— ರೂ 151 ಕೋಟಿಯ ಭಾರಿ ಪರಿಹಾರ ಕಾರ್ಯಕ್ರಮವು ತಯಾರಿಸಿ, ಪೂರ್ಣ ಪಟ್ಟಿಯನ್ನು ಕೇಂದ್ರದಿಂದೊದಗಲು ಪ್ರಧಾನಿಯವರಿಗೆ ಕಳುಹಿಸಲಾಗಿದೆ.

★

ಕಬಿನಿ ಪ್ರಾಜೆಕ್ಟ್

ಕೊಚ್ಚಿ — ಕಬಿನಿ ನದಿ ಮೇಲೆ ದೊಡ್ಡ ಅಣೆಕಟ್ಟು ಕಟ್ಟಲು ಕೇಂದ್ರ ತನ್ನ ಮುಂಜಾಗ್ರತೆ ಇತ್ತಿಲವೆಂದೂ, ಚಿಕ್ಕ ಅಣೆಕಟ್ಟಲು ಮಾತ್ರ ಅವಕಾಶ ಕೊಡಲಾಗಿದೆ ಎಂದು ಭಾರತ ನೀರಾವರಿ ಮಂತ್ರಿ ಡಾ ॥ ಕೆ. ಎಲ್. ರಾವ್ ಹೇಳಿದರು.

5 ಮಿಲಿಯ ಜೈನರ ಉಪವಾಸ

ಬೊಂಬಾಯಿ- ಆಗಾ, ಹತ್ತಿರ ಕಳೆದ ವಾರ ಢಕಾಯಿತರು ಅಪಹರಿಸಿದ ನಾಲ್ಕು ಮಂದಿ ಯುನೆಸ್ಕೊ ಯಾತ್ರಿಕರ ಬಿಡುಗಡೆಗಾಗಿ ದೇಶಾದ್ಯಂತ ಸುಮಾರು 5 ಮಿಲಿಯ ಜೈನರು ಭಾನುವಾರ ಉಪವಾಸವನ್ನಾಚರಿಸಿ ಸ್ಫೂರ್ತಿನೆಮಾಡುತ್ತಾರೆ.

ಮುಖ್ಯ ಮಂತ್ರಿಗಳಿಗೆ ತುರ್ತು ಕರೆ

ಹೈದರಾಬಾದು— ಡೆಲ್ಲಿಯಿಂದ ಬಂದ ತುರ್ತು ಕರೆಯಂತೆ ಮುಖ್ಯ ಮಂತ್ರಿ ಶ್ರೀ ನರಸಿಂಹ ರಾವ್‌ರವರು ಅಲ್ಲಿಗೆ ಪ್ರಯಾಣ ಮಾಡಿದರು

●

ಪ್ರಚಂಡ ವೆರವಣಿಗೆ

ವಿಶಾಖಪಟ್ಟಣ— ಒಂದು ಲಕ್ಷಕ್ಕೂ ಹೆಚ್ಚು ಮಂದಿಯ, ಡಾಕ್ಟರುಗಳು, ಲಾಯರುಗಳು, ಇಂಜಿನೀಯರುಗಳು, ವಿವಿಧ ವೃತ್ತಿಯ ಮತ್ತಿತರರು ಇದ್ದ ಅತ್ಯಂತ ಭಾರಿ ಮೆರವಣಿಗೆಯನ್ನು ಪ್ರತ್ಯೇಕ ಆಂಧ್ರ ರಾಜ್ಯದ ಜಿಂಬಲಕ್ಕಾಗಿ ನಡೆಸಲಾಯಿತು

●

ಬಹಿರಂಗ ವಿಚಾರಣೆಯೊಗಲಿ

ಕರಾಚಿ- ಮನೆ ಬಂಧನದಲ್ಲಿರುವ ಮಾಜಿ ಅಧ್ಯಕ್ಷ ಯಹ್ಯಾ ಖಾರ್ ರು ತಮ್ಮ ವಿಚಾರಣೆ ಬಹಿರಂಗವಾಗಿನಡೆಯಲೆಂದು ಅಧ್ಯಕ್ಷ ಭುಟ್ಟೋರಿಗೆ ತಿಳಿಸಿರುವರು.

★

ಭಾರತದ ವಿಜಯ

ಕಲ್ಕತ್ತಾ— ಇಂದಿನ ಕ್ರಿಕೆಟ್ ಟೆಸ್ಟ್ ನಲ್ಲಿ ಪ್ರವಾಸಿ ಎಂ. ಸಿ. ಸಿ ಟೀಮನ್ನು ಸೋಲಿಸಿ, ಭಾರತವು ವಿಜಯಗೊಂಡಿತು: ನಿಗದಿದ ಲಕ್ಷ್ಯಾಂತರ ಪ್ರೇಕ್ಷಕರ ಆನಂದ ಹೇಳತೀರದಷ್ಟಾಗಿತ್ತು.

ಪೋಲೀಸರ ಸಹಾಯಕ್ಕೆ ಸೈನ್ಯ

ಹೈದರಾಬಾದು— ನೆಲ್ಲೂರು ಪಟ್ಟಣದಲ್ಲಿ ಶಾಂತಿ ಶಿಸ್ತು ಪಾಲನೆಗೆ ಪೋಲೀಸರ ಸಹಾಯಕ್ಕೆ ಸೈನ್ಯವನ್ನೂ ಕರೆತರಲಾಗಿದೆ

★

ಪಾದಯಾತ್ರೆ

ಮೈಸೂರು— ಚಿಕ್ಕಹೊಳೆ ಅಣೆಕಟ್ಟು ಒಡೆದುದರಿಂದ ಸಂಕಷ್ಟಕ್ಕೀಡಾಗಿರುವವರಿಗೆ ಪರಿಹಾರಕ್ಕಾಗಿ ಧನ ಧಾನ್ಯ ಬಟ್ಟೆ ಇತ್ಯಾದಿ ಶೇಖರಣೆಗೆ ಬುಧವಾರ ಅಧಿಕಾರಿಗಳ, ಗಣ್ಯರ, ನಟನಟಿಯರ, ಮತ್ತಿತರರ ಪಾದಯಾತ್ರೆ ಯಶಸ್ವಿಯಾಗಿ ನಡೆಯಿತು.

○

ಆಹ್ವಾನ ತಿರಸ್ಕಾರ

ನವದೆಹಲಿ— ಪ್ರಧಾನಿ ಇಂದಿರಾರವರು ಪಾಕಿಸ್ತಾನಕ್ಕೆ ಭೇಟಿ ಕೊಡುವಂತೆ ಕೊಡಲಾಗಿದ್ದ ಆಹ್ವಾನವನ್ನು ತಿರಸ್ಕರಿಸುವದಾಗಿ ಅಧ್ಯಕ್ಷ ಭುಟ್ಟೋ ಹೇಳಿರುವರು.

★

ಪೌರಸಭೆಗಳ ರಿಟ್ ಅರ್ಜಿ

ಬೆಂಗಳೂರು— ತೆರಿಗೆ ಮತ್ತು ಕುಷ್ಟಗಿ ಪೌರಸಭೆಗಳಿಗೆ ಸರಕಾರ ಆಡಳಿತಗಾರರನ್ನು ನೇಮಿಸಿದ ಬಗ್ಗೆ ಹಾಕಲ್ಪಟ್ಟ ರಿಟ್ ಅರ್ಜಿಗಳನ್ನು ಹೈ ಕೋರ್ಟು ಸ್ವೀಕರಿಸಿ, ತಡೆ ಆಜ್ಞೆ ಇತ್ತಿದೆ.

ಕೋತಿಯ ಶವ ಸಂಸ್ಕಾರ

ಮಾಂಡ್ಯ— ಒಂದು ಕೋತಿಯ ಅಂತ್ಯಯಾತ್ರೆಯ ಮೆರವಣಿಗೆಯು ಪಟ್ಟಣದ ರಸ್ತೆಗಳಲ್ಲಿ ನಡೆಸಲಾಯಿತು — ಇದು ವಿಠ್ಠಲನಗರ ಭಾಗದಲ್ಲಿ ಅಚ್ಚುನುಚ್ಚಾಗಿತ್ತು — ವಿಧಿವಿತ್ತಾದ ಸಂಸ್ಕಾರದೊಡನೆ ಹೂಳಲಾಯಿತು.

ಚಿಕ್ಕ ಚಿಕ್ಕ ರಾಜ್ಯಗಳು

ಕೊಚ್ಚಿ— ದೇಶವನ್ನು ಚಿಕ್ಕ ಚಿಕ್ಕ ರಾಜ್ಯಗಳಾಗಿ ಪುನರ್ ವ್ಯವಸ್ಥೆಗೊಳಿಸಲು ಅಖಿಲ ಭಾರತ ಸರ್ವ ಸೇವಾ ಸಂಘ ಸಲಹೆ ಮಾಡಿದೆ.

★

450 ಸಂಸಾರಗಳ ದತ್ತು

ಬೊಂಬಾಯಿ— ಅಭಾವಪೀಡಿತ 450 ಸಂಸಾರಗಳನ್ನು ದತ್ತು ಮಾಡಿಕೊಳ್ಳಲು ಮುಖ್ಯಮಂತ್ರಿಗಳ ಕೇಳಿಕೆಗೆ 3 ಇಂಡೋ ಜರ್ಮ್ ಕಂಪೆನಿಗಳು ಸಮ್ಮತಿಸಿ, ಈ ಖರ್ಚಿಗಾಗಿ ರೂ 150000 ಚಕ್ ಮುಖ್ಯಮಂತ್ರಿಯವರಿಗೆ ಕೊಡಲಿದ್ದಾರೆ.

★

ನ್ಯಾಷನಲ್ ಅಸೆಂಬ್ಲಿ ಬಹಿಷ್ಕಾರ

ಇಸ್ಲಾಮಾಬಾದ್— ಪಾಕಿಸ್ತಾನ್ ನ್ಯಾಷನಲ್ ಅಸೆಂಬ್ಲಿಯಲ್ಲಿ ಬಿಸಿಬಿಸಿ ಮಾತುಕತೆ ನಡೆದು, ಅವಾಮಿ ಲೀಗ್ ನಾಯಕ ಖಾನ್ ಅಬ್ದುಲ್ ವಾಲಿ ಖಾನ್, ನ್ಯಾಯಾಂಗ ಮಂತ್ರಿ ಅಬ್ದುಲ್ ಹಫೀಜ್ ಪಿರ್ಜಾದರ ಕತ್ತನ್ನು ಹಿಸುಕಿ, ನಾಲಿಗೆಯನ್ನು ಎಳೆದುಹಾಕುವೆನೆಂದು ಹೇಳಿದ್ದರಿಂದ ವಿರೋಧ ಪಾರ್ಲಿಮೆಂಟು ಸದಸ್ಯರೆಲ್ಲಾ ಅಸೆಂಬ್ಲಿಗೆ ಬಹಿಷ್ಕಾರ ಹಾಕಿದರು.

ಸರ್ಕಾರದ ಮೇಲೆ ಆರೋಪ

ನವದೆಹಲಿ— ನೂರಕ್ಕೂ ಹೆಚ್ಚು ಮಂದಿ ವಿಶ್ವವಿದ್ಯಾಲಯದ ಉಪಾಧ್ಯಾಯರು, ಲೇಖಕರು, ಕವಿಗಳು, ಪತ್ರಿಕೋದ್ಯೋಗಿಗಳು, ಲಾಯರುಗಳು, ಡಾಕ್ಟರುಗಳು ಕರೆದಿದ್ದ ರಾಷ್ಟ್ರೀಯ ಸಮ್ಮೇಳನದಲ್ಲಿ ಸ್ವಾತಂತ್ರ್ಯ ನಂತರ 25 ವರ್ಷಗಳಿಂದ ಸರಕಾರವು ಎಲ್ಲ ವಿಧದ ಮೋಸ ಮತ್ತು ಸರ್ವಾಧಿಕಾರಶಾಹಿಯ ಮಾರ್ಗ ಅನುಸರಿಸುತ್ತಿದೆ ಎಂದು ಆಪಾದಿಸಲಾಯಿತು.

ಸವಿನುಡಿ

ಮನುಷ್ಯನ ಆಯುಸ್ಸು ಕ್ಷಣಭುಂಗುವಾದದ್ದು ; ಯಾವ ಕ್ಷಣದಲ್ಲಿ ಮರಣ ಬರುವುದೋ ತಿಳಿಯದು ; ಆದುದರಿಂದ ನಾವು ಪ್ರಜೆಗಳಾಗಲೀ ರಾಜನಾಗಲೀ ಪ್ರಮಾದ ಮಾಡದೆ, ಕುಕರ್ಮಗಳಿಗೆ ತೊಡಗದೆ, ಭಗವಂತನು ತೋರಿಸುವ ಧರ್ಮ ಪಥದಲ್ಲಿ ನಡೆದುಕೊಂಡು ಜನ್ಮಸಾಫಲ್ಯ ಮಾಡಬೇಕು. — ಅಹಿಂಸಾವಾಣಿ

★

ಸೂಕ್ತಿ ಸುಧಾಂಶಗಳು

ಅರಿಯದಾತಗೆ ಧರ್ಮವನು ವಿ । ಸ್ತರದಲುಪದೇಶಿಸಿದಡದು ತಾ ॥ ನಿರದೆ ವ್ಯರ್ಥವನೈದುವದು, ಉಪದೇಶವಿತ್ತವರ ॥ ಗುರುತರದ ಗುಣವಡಗಿ, ಜನ್ಮಿಸ । ದಿರರು ರಜಕನ ದುಷ್ಕುಲದಿ, ನೀ । ನರಿತವನಲ್ಲೈ, ನಿನ್ನ ನೀನೇ ತಿಳಿದುನೋಡೆಂದ ॥

ಕಾಮದಿಂ ಧನ ಕೆಡುಗು, ಮತ್ತಾ । ಕಾಮದಿಂ ಚ್ಯುತಿಯಕ್ಕುಂದು ಮಾನವು । ಕಾಮದಿಂ ಮಂಗಲವು ಸೋಪುದು, ವಹ್ನಿಯಂದದಲಿ ॥ ಕಾಮವೇ ದಹಿಸುವುದು ದೇಹವ । ಕಾಮವಾರಿಗೆ ಸುಖವ ಕೊಡುವುದು । ಕಾಮವನು ಬಿಡು, ಕಾಮದಲಿ ಕೆಡಬೇಡ ನೀನೆಂದ ॥ (ವಿಜಯ ಸಾಹಿತ್ಯಮಾಲೆ)

★

ದಿವ್ಯವಾಣಿ

ಮನಸ್ಸೇ, ದುಷ್ಟ ವಾಸನೆಗಳಿಗೆ ವಶವಾಗಬೇಡ
ಮನಸ್ಸೇ, ಸಾಸಬುದ್ಧಿಗೆ ಅಧೀನವಾಗಬೇಡ. — ಸಮರ್ಥ ರಾಮದಾಸ್

ವುಡ್‌ಲಾಂಡ್ಸ್ 5 1 73 ರಿಂದ ಅನೋಭ 4ನೇ ವಾರ

ಸೆವೆ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 3 ಪ್ರದರ್ಶನಗಳು

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಕ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

★

ಅ ಪೆ ರಾ 28 12 72 ರಿಂದ

ಜಯಂತಿ ಫಿಲಂಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ರಾಮನ್ ತೇಡಿಯ ಸೀತೈ

ಪಾತ್ರ – ಎಂ. ಜಿ. ರಾಮಚಂದ್ರ್ ಜಯಲಲಿತ ತಾಯ್‌ನಾಗೇಶ್
ವಿ. ಕೆ. ರಾಮಸ್ವಾಮಿ

ಸಂಗೀತ – ಎಂ ಎಸ್. ವಿಶ್ವನಾಥ್ ನಿರ್ದೇಶನ – ಪಿ ನೀಲಕಂಠ್

ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

ಭಾರತದಲ್ಲಿ ಗೋವಧೆ
ಪೂರ್ಣ ನಿಷೇಧವಾಗಲಿ

Protect the Cow



Help The Gorakshana

— Humanitarian Propoganda Monthly....

Quality Printing Neat Binding

Lakshminarasimha Press

Sivarampet, Mysore 1

Edited Printed and Published by Dharmapracharanirata M S Krishna Rao (Proprietor) at the Satyavadi Press, Chamaraja puram, Mysore 4

Contribute Liberally to the National Defence Fund